KANNADA

# *The Spoken Word*

# ಹಾಗಾದರೆ ನೀವು ಯಾವುದನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿರಿ?

(ಅಪೋ.ಕೃ19:3)

*WILLIAM MARRION BRANHAM*

# ಹಾಗಾದರೆ ನೀವು ಯಾವುದನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿರಿ?

(ಅಪೊ.ಕೃ19:3)

ನಮ್ಮ ಪ್ರಭುವಾದ ಯೇಸುಕ್ರಿಸ್ತನಲ್ಲಿ ಪ್ರಿಯರಾದ ಕ್ರೈಸ್ತ ಸಹೋದರ ಸಹೋದರಿಯೆ!

ನಿಮ್ಮನ್ನು ಯೇಸುಕ್ರಿಸ್ತನ ಪ್ರೀತಿಯಲ್ಲಿ ಪ್ರೀತಿಸುತ್ತಾ ಸತ್ಯವೇದದ (ಬೈಬಲನ) ಸತ್ಯವಾಕ್ಯವನ್ನು ತಿಳಿಯಪಡಿಸುವುದರಲ್ಲಿ ಸಂತೋಷಿಸುತ್ತೇವೆ. ಪರಿಶುದ್ಧ ಆತ್ಮನಿಂದ ಪ್ರೇರಿಸಲ್ಪಡುತ್ತಾ ಈ ಚಿಕ್ಕ ಪುಸ್ತಕವನ್ನು ಪರಿಚಯಿಸುವುದರಲ್ಲಿ ಸಂತೋಷವುಳ್ಳವರಾಗಿದ್ದೇವೆ.

ಈ ಚಿಕ್ಕ ಪುಸ್ತಕವನ್ನು ದೇವರ ಪ್ರೀತಿಯಿಂದಲೂ, ಸಹನೆಯಿಂದಲೂ, ದೇವರ ಭಯಭಕ್ತಿಯಿಂದಲೂ ಪೂರ್ಣವಾಗಿ ಓದಬೇಕೆಂದು ವಿನಂತಿಸುತ್ತೇವೆ.

ಸತ್ಯವೇದದಲ್ಲಿ (ಬೈಬಲ್‌ನಲ್ಲಿ) ಈ ರೀತಿಯಾಗಿ ಬರೆಯಲ್ಪಟ್ಟಿದೆ :

- ☛ **ಸತ್ಯವು (ತತ್ವವು) ಬಹುದೂರ, ಅಗಾಧವೇ ಅಗಾಧ. ಅದನ್ನು ಯಾರು ಕಂಡುಕೊಂಡಾರು?** (ಪ್ರಸಂಗಿ 7:24).
- ☛ **ಎಲ್ಲವನ್ನು ಪರಿಶೋಧಿಸಿ ಒಳ್ಳೆಯದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ** (1 ಥೆಸ 5:21).
- ☛ **ಯೆಯೋವನ ಶಾಸ್ತ್ರದಲ್ಲಿ ಹುಡುಕಿ ಓದಿರಿ** (ಯೇಶಾಯ 34:16).
- ☛ **ನ್ಯಾಯವನ್ನೇ ಆರಿಸಿಕೊಳ್ಳೋಣ, ಒಳ್ಳೆಯದು ಇಂಥದೆಂದು ನಮ್ಮನಮ್ಮೊಳಗೆ ನಿಶ್ಚಯಿಸಿಕೊಳ್ಳೋಣ** (ಯೋಬ 34:4).

ಈಗಿರುವ ಪ್ರಪಂಚದ ಸಮಸ್ತ ಕ್ರೈಸ್ತ ಸಂಘ ಸಂಸ್ಥೆಗಳಲ್ಲಿ ದೇವರ ವಾಕ್ಯಕ್ಕೆ ವಿರುದ್ಧವಾಗಿರುವ ಮನುಷ್ಯ ಕಲ್ಪಿತ ಪದ್ಧತಿಗಳು, ಸಿದ್ಧಾಂತ, ಆಚಾರಗಳು ಮತ್ತು ಕಟ್ಟಳೆಗಳು ಅನೇಕ ವಿಧವಾಗಿವೆ.

ಒಂದುವೇಳೆ ನಾವು ಮನುಷ್ಯ ಕಲ್ಪಿತ ಪದ್ಧತಿಗಳನ್ನು ಬೋಧಿಸಿ ಅದರಂತೆ ನಡೆದು ದೇವರಾಧನೆ ಮಾಡಿದರೆ ಅದು ವ್ಯರ್ಥವಾದ ದೇವಾರಾಧನೆಯಾಗಿರುತ್ತದೆ.

- ☛ ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವುದರಿಂದ ನನಗೆ ಭಕ್ತಿ ತೋರಿಸುವುದು ವ್ಯರ್ಥ ಎಂಬುದೇ (ಮಾರ್ಕ 7:7).

ಮನುಷ್ಯರು ಕಲ್ಪಿಸಿದ ಪದ್ಧತಿಗಳು ಹಲವಾರುಗಳಿವೆ. ಅವುಗಳಲ್ಲಿ ಮುಖ್ಯವಾಗಿ:

## ನೀರಿನ ದೀಕ್ಷಾಸ್ನಾನದ ವಿಧಗಳು

ಸಹೋದರನೆ/ಸಹೋದರಿಯೆ ನೀವು ದೀಕ್ಷಾಸ್ನಾನ ಪಡೆಯುವಾಗ, ಕೊಡುವಾಗ ಸತ್ಯವೇದದಲ್ಲಿ (ಬೈಬಲ್‌ನಲ್ಲಿ) ಇರುವಂತ ರೀತಿ ಮತ್ತು ವಿಧಾನಗಳನ್ನು ಪರಿಶಿಲಿಸಿದಿಯಾ?

ಈಗಿರುವ ಕ್ರೈಸ್ತ ಸಭಾಸಂಸ್ಥೆಗಳಲ್ಲಿ ದೀಕ್ಷಾಸ್ನಾನದ ಕುರಿತು ಎರಡು ವಿಧವಾದ ಅಭಿಪ್ರಾಯಗಳನ್ನು ಹೊಂದಿದವರಾಗಿದ್ದಾರೆ. ಅವು ಯಾವುವೆಂದರೆ:

- ★ ಕೆಲವರು ದೀಕ್ಷಾಸ್ನಾನ ಬೇಡವೆನ್ನುವವರು.
- ★ ಕೆಲವರು ದೀಕ್ಷಾಸ್ನಾನ ಬಹುಮುಖ್ಯವೆನ್ನುವವರು.

ಬೈಬಲ್‌ನ ಪ್ರಕಾರ ದೀಕ್ಷಾಸ್ನಾನವು ಅವಶ್ಯವಾಗಿದೆ ಅದು ದೇವರ ಆಜ್ಞೆಯಾಗಿದೆ.

- **ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೇ ಹೋಗುವವನು ದಂಡನೆಗೆ ಗುರಿಯಾಗುವನು** (ಮಾರ್ಕ 16:16)
- **ಅದಕ್ಕೆ ಯೇಸು – ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ: ಒಬ್ಬನು ನೀರಿನಿಂದಲೂ, ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು** (ಯೋಹಾನ 3:5).
- **ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ** (1 ಪ್ರೇತ 3:21).

ದೀಕ್ಷಾ ಸ್ನಾನವು ಅವಶ್ಯವಿಲ್ಲವೆಂದು ಹೇಳುವವರು ಕ್ರಿಸ್ತನು ಶಿಲುಬೆಯಲ್ಲಿ ಇದ್ದಾಗ ಬಲಗಡೆಯಲ್ಲಿದ್ದ ಕಳ್ಳನು ಯಾವರೀತಿಯಾದ ದೀಕ್ಷಾಸ್ನಾನ ಪಡೆದನು ಎಂಬುದಾಗಿ ಕೇಳುತ್ತಾರೆ.

**ಗಮನಿಸಿರಿ:** ಶಿಲುಬೆಯಲ್ಲಿದ್ದಂತ ಕಳ್ಳನು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡಿರಬಹುದು ಅಥವಾ ಇಲ್ಲದೆ ಇರಬಹುದು, ಇದನ್ನು ಕುರಿತು ನೀವು ಸತ್ಯವೇದದಲ್ಲಿ ತೋರಿಸಬಲ್ಲಿರಾ? ಆ ಕಳ್ಳನು ದೀಕ್ಷಾಸ್ನಾನ ಹೊಂದುವುದಕ್ಕೆ ಅನುಕೂಲವಿಲ್ಲದೆ ಕ್ರಿಸ್ತನನ್ನು ಅಂಗೀಕರಿಸಿ ಪಾಪದ ಅರಿಕೆಯನ್ನು ಮಾಡಿ ರಕ್ಷಿಸಲ್ಪಟ್ಟನು. ದೀಕ್ಷಾಸ್ನಾನ ಬೇಡವೆನ್ನುವವರು ಈ ರೀತಿಯ ವಾಗ್ವಾದ ಮಾಡುವುದು ವಾಕ್ಯಕ್ಕೆ ವಿರುದ್ಧವಾದ್ದು.

**ದೀಕ್ಷಾಸ್ನಾನವು ಮುಖ್ಯವೆಂದು ಹೇಳುವವರಲ್ಲಿ ಈ ರೀತಿಯಾದ ಕೆಲವು ಅಭಿಪ್ರಾಯಗಳಿವೆ, ಅವು ಯಾವುವೆಂದರೆ :**

1. ಚಿಕ್ಕ ಮಕ್ಕಳಿಗೆ ದೀಕ್ಷಾಸ್ನಾನ ಮಾಡಿಸುವುದು.
2. ನೀರು ಚಿಮುಕಿಸುವುದರ ಮೂಲಕ ದೀಕ್ಷಾಸ್ನಾನ ಮಾಡಿವುದುದು.
3. ಮೂರುಸಾರಿ ನೀರಿನಲ್ಲಿ ಮುಳುಗಿಸುವುದು.
4. ಒಂದೇಸಾರಿ ನೀರಿನಲ್ಲಿ ಮುಳುಗಿಸುವುದು.
5. ಮದುವೆಯ ನಿಮಿತ್ತ ದೀಕ್ಷಾಸ್ನಾನ ಮಾಡಿಸುವುದು.
6. ಧ್ವಜದ ಕೆಳಗೆ ಹೋಗುವುದರ ಮೂಲಕ ದೀಕ್ಷಾಸ್ನಾನ ಮಾಡಿಸುವುದು.
7. ಕೆಲವರು ತಂದೆ–ಮಗ ಪವಿತ್ರಾತ್ಮನ ತ್ರೈಯೇಕ ದೇವರ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುವರು.
8. ಇನ್ನು ಕೆಲವರು ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುವರು.

## ಇವುಗಳ ಕುರಿತಾಗಿ ನಾವು ದೇವರ ವಾಕ್ಯದಲ್ಲಿ (ಬೈಬಲ್‌ನಲ್ಲಿ) ಪರಿಶೀಲಿಸಿ ನೋಡೋಣ

1) ಚಿಕ್ಕ ಮಕ್ಕಳಿಗೆ ದೀಕ್ಷಾಸ್ನಾನ ಮಾಡಿಸುವುದಕ್ಕೆ ಸತ್ಯವೇದದಲ್ಲಿ ಯಾವರೀತಿಯ ಆಧಾರವಿಲ್ಲ. ಆದರೆ ಮಾನಸಾಂತರ ಹೊಂದಿದ ಬಳಿಕವೇ ದೀಕ್ಷಾಸ್ನಾನ ಹೊಂದಬೇಕು.

- ಪ್ರೇತನು ಅವರಿಗೆ – ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ **ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ** (ಅಪ್ರೋ.ಕೃ 2:38).

ಚಿಕ್ಕ ಮಕ್ಕಳಿಗೆ ಮಾನಸಾಂತರ ಇರುವುದಿಲ್ಲ. ಪಶ್ಚಾತ್ತಾಪ ಏನೆಂಬುವುದು ಅವರಿಗೆ ತಿಳಿಯದು. ಆದರೆ ಚಿಕ್ಕ ಮಕ್ಕಳಿಗೆ ನೀರು ಚಿಮುಕಿಸಿಯಾಗಲಿ, ಒಂದುಸಾರಿ ಅಥವಾ ಮೂರುಸಾರಿ ನೀರಿನಲ್ಲಿ ಮುಳುಗಿಸಿ ದೀಕ್ಷಾಸ್ನಾನ ಮಾಡಿಸುವುದು ಸತ್ಯವೇದಕ್ಕೆ ವಿರುದ್ಧವಾದದ್ದು.

**ಗಮನಿಸಿರಿ:** ಸ್ನಾನಿಕನಾದ ಯೋಹಾನನು ಕೂಡ ಚಿಕ್ಕ ಮಕ್ಕಳಿಗೆ ದೀಕ್ಷಾಸ್ನಾನ ಮಾಡಿಸಲಿಲ್ಲ.

2) ನೀರನ್ನು ಚಿಮುಕಿಸಿ ದೀಕ್ಷಾಸ್ನಾನ ಮಾಡಿಸುವುದಕ್ಕೆ ಸತ್ಯವೇದದಲ್ಲಿ ಯಾವ ಆಧಾರಗಳು ಇರುವುದಿಲ್ಲ. ಆದರೆ ನೀರಿನಲ್ಲಿ ಮುಳುಗಿಸಿ ದೀಕ್ಷಾಸ್ನಾನ ಮಾಡಿಸುವ ವಿಧಾನ ಮಾತ್ರ ಇರುತ್ತದೆ. ದೀಕ್ಷಾಸ್ನಾನ ಎಂಬ ಪದವು ಗ್ರೀಕ್ ಭಾಷೆಯ ಪದ ಬ್ಯಾಪ್ಟಿಜೋ (baptizo) ಈ ಪದದ ಅರ್ಥ "ನೀರಿನಲ್ಲಿ ಮುಳುಗಿಸುವುದು.

**ದೇವರ ವಾಕ್ಯದಲ್ಲಿ ನೀರಿನಲ್ಲಿ ಮುಳುಗಿಸಿ ದೀಕ್ಷಾಸ್ನಾನ ಕೊಟ್ಟು ಮತ್ತು ತೆಗೆದುಕೊಂಡುದಕ್ಕೆ ಹಲವು ಆಧಾರಗಳಿವೆ:**

- **ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡ ಕೂಡಲೇ ನೀರಿನಿಂದ ಮೇಲಕ್ಕೆ ಬರಲು...** (ಮತ್ತಾಯ 3:16)
- **ಯೋಹನನು ಸಲೀಮೂರಿನ ಹತ್ತಿರವಿರುವ ಐನೋನೆಂಬ ಸ್ಥಳದಲ್ಲಿದ್ದು ದೀಕ್ಷಾಸ್ನಾನ ಮಾಡಿಸುತ್ತಿದ್ದನು; ಅಲ್ಲಿ ಬಹಳ ನೀರಿತ್ತು; ಜನರು ಬಂದು ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಾ ಇದ್ದರು** (ಯೋಹಾನ 3:23)
- **ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀರಿನ ಬಳಿಗೆ ಬಂದರು. ಕಂಚುಕಿಯೂ– ಅಗೋ, ನೀರು; ನನಗೆ ದೀಕ್ಷಾಸ್ನಾನ ಆಗುವುದಕ್ಕೆ ಅಡ್ಡಿ ಏನು ಎಂದು ಹೇಳಿ ರಥವನ್ನು ನಿಲ್ಲಿಸು ಎಂದು ಅಪ್ಪಣೆಕೊಟ್ಟನು; ಫಿಲಿಪ್ಪನು ಕಂಚುಕಿಯು ಇಬ್ಬರು ನೀರಿನೊಳಗೆ ಇಳಿದರು, ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು.** (ಅಪೋ.ಕೃ 8:36–38).

ಆದುದರಿಂದ ನೀರನ್ನು ಚಿಮುಕಿಸಿ ದೀಕ್ಷಾಸ್ನಾನ ಮಾಡಿಸುವುದು ಸತ್ಯವೇದಕ್ಕೆ ವಿರುದ್ಧವಾಗಿದೆ.

## ಇತಿಹಾಸದಲ್ಲಿ ಸಭೆಗಳ ಸಂಸ್ಥಾಪಕರ ಸಾಕ್ಷಿಗಳು

### ಸಭಾನಾಯಕರ ಅಭಿಪ್ರಾಯದ ಪ್ರಕಾರ ನೀರಿನ ದೀಕ್ಷಾಸ್ನಾನ

**ಜಾನ್ ಕೆಲ್ವಿನ್ (ಪ್ರೆಸ್ಬೆಟೆರಿಯನ್ ಸಭೆ):** ದೀಕ್ಷಾಸ್ನಾನ (Baptizm) ಪದದ ಅರ್ಥ "ನೀರಿನಲ್ಲಿ ಮುಳುಗಿಸುವುದು". ಮುಳುಗಿಸಿ ದೀಕ್ಷಾಸ್ನಾನ ಮಾಡಿಸುವುದು ಆದಿ ಸಭೆಯ ಪದ್ಧತಿ.

**ಮಾರ್ಟಿನ್ ಲೂಥರ್ (ಲೂಥರ್‌ನ ಸಭೆ):** ಗ್ರೀಕ್ ಪದವಾದ ದೀಕ್ಷಾಸ್ನಾನ (Baptizm) ವನ್ನು ನೀರಿನಲ್ಲಿ ಮುಳುಗಿಸುವುದು ಎಂಬುದಾಗಿ ಭಾಷಾಂತರಿಸಲಾಗಿದೆ. ಯಾರಾದರೂ ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳಲು ಬಯಸುವದಾದರೆ ಅವರು ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು.

**ಜಾನ್‌ವೇಸ್ಲಿ (ಮೇಥೋಡಿಸ್ಟ ಸಭೆ):** ನೀರಿನಲ್ಲಿ ಮುಳುಗಿಸಿ ದೀಕ್ಷಾಸ್ನಾನ ತೆಗೆಯುವುದು ನಾವು ಕ್ರಿಸ್ತನೊಂದಿಗೆ ಹೂಣಲ್ಪಟ್ಟೆವು ಎಂಬ ಅರ್ಥವನ್ನು ಸೂಚಿಸುತ್ತದೆ. ಇದು ಆದಿಸಭೆಯ ನಿಯಮ.

**ವಾಲ್ (ಎಫಿಸ್ಕೋಪಲ್ ಸಭೆ) :** ಪರಿಶುದ್ಧವಾದ ದೇವ ಜನರು ಮತ್ತು ಆದಿ ಕ್ರೈಸ್ತರು ನಿಶ್ಚಯವಾಗಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಂಡರು.

**ಬ್ರೇನರ್ (ಕ್ಯಾಥೋಲಿಕ್ ಸಭೆ) :** ಕ್ರಿ.ಶ. 300ರವರೆಗೂ ಎಲ್ಲರೂ ನೀರಿನಲ್ಲಿ ಮುಳುಗಿಯೇ ದೀಕ್ಷಾಸ್ನಾನ ಹೊಂದಿದರು.

**ಸ್ಟ್ವಾಡ್ಜ (ಮೂಲತಃ ಇವರು ಗ್ರೀಕ್ ದೇಶದ ವ್ಯಕ್ತಿ):** ದೀಕ್ಷಾಸ್ನಾನ (Baptizm) ಎಂಬ ಪದವು ಒಂದೇ ಅರ್ಥವನ್ನು ಹೊಂದಿದೆ, ಅದು ಮುಳುಗಿಸುವುದನ್ನೇ ಸೂಚಿಸುವಂತದ್ದಾಗಿದೆ. (Baptizm) ದೀಕ್ಷಾಸ್ನಾನ ಮತ್ತು ಮುಳುಗಿಸುವುದು ಒಂದೇ ಅರ್ಥವನ್ನು ಹೊಂದಿದೆ.

**ವೈಟ್ ಫೀಲ್ಡ್ (ಮೇಥೋಡಿಸ್ಟ ಸಭೆ):** ರೋಮ 6:4 ಪ್ರಕಾರ ಹೂಣಲ್ಪಡು ಎನ್ನುವ ಪದ ನಿಶ್ಚಯವಾಗಿ ಮುಳುಗಿಸುವ ದೀಕ್ಷಾಸ್ನಾನವನ್ನು ಸೂಚಿಸುತ್ತದೆ.

3) **ಮೂರುಸಾರಿ ನೀರಿನಲ್ಲಿ ಮುಳುಗಿಸಿ ದೀಕ್ಷಾಸ್ನಾನ ಮಾಡಿಸುವುದು ಸತ್ಯವೇದದ ವಿಧಾನವಲ್ಲ.** ದೀಕ್ಷಾ ಸ್ನಾನವು ಆತನೊಂದಿಗೆ ಸತ್ತು ಹೂಣಲ್ಪಡುವುದನ್ನು ಸೂಚಿಸುತ್ತದೆ.

- **ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುದಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು, ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದ ಎದ್ದು ಹೊಸಬರಾಗಿ ನಡೆದುಕೊಳ್ಳಬೇಕು** (ರೋಮ 6:4).

ಹಾಗಾದರೆ ಯೇಸುಕ್ರಿಸ್ತನು ನಮಗಾಗಿ ಮೂರುಸಾರಿ ಸತ್ತು ಹೂಣಲ್ಪಡುವುದುಂಟೆ? ಇಲ್ಲ, ಒಂದೇಸಾರಿ ಸತ್ತು ಎದ್ದನು ಎಂದು ಸತ್ಯವೇದ ಹೇಳುತ್ತದೆ.

☛ **ಆತನು ಸತ್ತದ್ದು ಒಂದೇಸಾರಿ. ಅದು ಪಾಪದ ಪಾಲಿಗೆ. ಆತನು ಜೀವಿಸುವುದು ದೇವರಿಗಾಗಿಯೇ.** (ರೋಮ 6:10)

4) ಮೇಲೆ ತಿಳಿಸಿದ ಪ್ರಕಾರ ಒಂದೇಸಾರಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು ಪರಿಪೂರ್ಣವಾಗಿ ವಾಕ್ಯಾನುಸಾರವಾಗಿದೆ.

5) ನಾವು ನಮ್ಮ ಪಾಪಗಳಿಗಾಗಿ ಮಾನಸಾಂತರ ಹೊಂದಿದ ಬಳಿಕವೇ ದೀಕ್ಷಾಸ್ನಾನ ಪಡೆಯಬೇಕು. ಆದರೆ ಮದುವೆಯ ನಿಮಿತ್ತ ಹಾಗೂ ಪ್ರಮಾಣ ಪತ್ರಕ್ಕಾಗಿ ದೀಕ್ಷಾಸ್ನಾನ ಮಾಡಿಸುವುದಕ್ಕೆ ಸತ್ಯವೇದದಲ್ಲಿ ಆಧಾರವಿಲ್ಲ. ಆದುದರಿಂದ ಅದು ವಾಕ್ಯಕ್ಕೆ ವಿರುದ್ಧವಾಗಿದೆ.

6) ಧ್ವಜದ ಕೆಳಗೆ ಹೋಗುವುದು, ಶಿಲುಬೆ ಗುರುತಿನ ದೀಕ್ಷಾಸ್ನಾನ ಹಾಗೂ ಮರಳಲ್ಲಿ ಹೂಣಿಡುವ ದೀಕ್ಷಾಸ್ನಾನ ಸತ್ಯವೇದದಲ್ಲಿ ಇಲ್ಲ. ಆದುದರಿಂದ ಈ ವಿಧಾನಗಳು ವಾಕ್ಯಕ್ಕೆ ವಿರುದ್ಧ.

**ಪ್ರಿಯರೇ, ಇದುವರೆಗೂ ನಾವು ಅನೇಕರೀತಿಯ ದೀಕ್ಷಾಸ್ನಾನದ ಕುರಿತು ತಿಳಿದುಕೊಂಡೆವು. ಈಗ**

## ಯಾವ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಕೊಡಬೇಕು/ತೆಗೆದುಕೊಳ್ಳಬೇಕು?

### ಈ ಕುರಿತು ದೇವರ ವಾಕ್ಯದಲ್ಲಿ ಪರಿಶೀಲಿಸಿ ನೋಡೋಣ.

★ ತಂದೆ ಮಗ ಪವಿತ್ರಾತ್ಮನ ಹೆಸರಿನಲ್ಲೋ ?

★ ತಂದೆ ಮಗ ಪರಿಶುದ್ಧಾತ್ಮ ತ್ರೈಯೆಕ ದೇವರಾದ ಯೇಸುಕ್ರಿಸ್ತನ ಹೆಸರಿನಲ್ಲೋ ?

★ ಯೇಸುವಿನ ಹೆಸರಿನಲ್ಲೋ ?

★ ಯೇಸುಕ್ರಿಸ್ತನ ಹೆಸರಿನಲ್ಲೋ ?

**ಗಮನಿಸಿ:** ಸತ್ಯವೇದದಲ್ಲಿ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ತೆಗೆದುಕೊಂಡದ್ದಕ್ಕೂ, ಕೊಟ್ಟದ್ದಕ್ಕೂ ಸಾಕ್ಷಿ ಆಧಾರಗಳಿವೆ.

☛ **ಪೇತ್ರನು ಅವರಿಗೆ – ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ** (ಅಪೋ.ಕೃ 2:38).

☛ **ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು; ಆ ದಿನ ಸುಮಾರು 3000 ಜನರು ಅವರಲ್ಲಿ ಸೇರಿದರು** (ಅಪೋ.ಕೃ 2:41).

☛ **ಯಾಕೆಂದರೆ ಆ ವರವು ಅವರಲ್ಲಿ ಒಬ್ಬರ ಮೇಲಾದರು ಇನ್ನು ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾತ್ರ ಮಾಡಿಸಿಕೊಂಡಿದ್ದರು** (ಅಪೋ.ಕೃ 8:16).

☛ **ನೀವು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳಬೇಕೆಂದು ಅಪ್ಪಣೆ ಕೊಟ್ಟನು** (ಅಪೋ.ಕೃ 10:48).

☛ **ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು** (ಅಪೋ.ಕೃ 19:5).

☛ **ನಿಮ್ಮಲ್ಲಿ ಕೆಲವರು ಅಂಥವರಾಗಿದ್ದೀರಿ; ಆದರೂ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿಯೂ, ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ** (1 ಕೊರಿ 6:11).

ತಂದೆ ಮಗ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ತೆಗೆದುಕೊಂಡದಕ್ಕಾಗಲಿ, ಕೊಟ್ಟದಕ್ಕಾಗಲಿ ಬೈಬಲ್ ಗ್ರಂಥದಲ್ಲಿ ಯಾವ ಆಧಾರವೂ ಇರುವುದಿಲ್ಲ.

## ಮತ್ತಾಯ 28:19ರ ಪ್ರಕಾರ "ತಂದೆಯ ಮಗನ ಪವಿತ್ರಾತ್ಮನ ಹೆಸರಿನಲ್ಲಿ" ದೀಕ್ಷಾಸ್ನಾನದ ವಿವರಣೆ.

★ ತಂದೆಯ ಹೆಸರೇನು? ತಂದೆಯ ಹೆಸರು ತಂದೇನಾ ! .... ಇಲ್ಲ.

★ ಮಗನ ಹೆಸರೇನು? ಮಗನ ಹೆಸರು ಮಗನೇನಾ ! .... ಇಲ್ಲ.

★ ಪವಿತ್ರಾತ್ಮನ ಹೆಸರೇನು ? ಪವಿತ್ರಾತ್ಮನ ಹೆಸರು ಪವಿತ್ರಾತ್ಮನೇನಾ ! .... ಇಲ್ಲ.

ಈಗಿನ ಕ್ರೈಸ್ತರು ಆ ಹೆಸರಿನ ಅರ್ಥವನ್ನು ತಿಳಿಯದೆ ತಂದೆಯ ಹೆಸರು ಯೇಹೋವಾ ಎಂದು ಮಗನ ಹೆಸರು ಯೇಸುಕ್ರಿಸ್ತನೆಂದು ಪವಿತ್ರಾತ್ಮನ ಹೆಸರು ಪವಿತ್ರಾತ್ಮನೆಂದು ಅಥವಾ ವಿವರಣಾ ಕರ್ತನೆಂದು ಹೇಳುತ್ತಿದ್ದಾರೆ. ಇನ್ನು ಕೆಲವರು "ತಂದೆಯ, ಮಗನ, ಪವಿತ್ರಾತ್ಮನ" ಎಂಬ ಪದಗಳನ್ನು ಹೆಸರುಗಳೆಂದು ಹೇಳುತ್ತಾರೆ. ತಂದೆ ಎನ್ನುವುದು ಹೆಸರಲ್ಲ, ಮಗ ಎಂಬುವುದು ಹೆಸರಲ್ಲ, ಪವಿತ್ರಾತ್ಮ ಎನ್ನುವುದು ಹೆಸರಲ್ಲ ಅವು ಬಿರುದುಗಳು ಮಾತ್ರ.

☛ ತಂದೆ ಎನ್ನುವ ಹೆಸರಿನ ಅರ್ಥ: **ಯೇಸುಕ್ರಿಸ್ತ** – ಯೋಹಾ 17:11, ವಿಮೋ 23:20–22

☛ ಮಗ ಎನ್ನುವ ಹೆಸರಿನ ಅರ್ಥ: **ಯೇಸುಕ್ರಿಸ್ತ** – ಯೋಹಾ 5:43, 17:11

☛ ಪವಿತ್ರಾತ್ಮ ಎನ್ನುವ ಹೆಸರಿನ ಅರ್ಥ: **ಯೇಸುಕ್ರಿಸ್ತ** – ಯೋಹಾ 14:26, 1 ಯೋಹಾ 2:1

1. **ಯೋಹಾನ 17:11ರಲ್ಲಿ ತಂದೆಯ ಹೆಸರನ್ನು ಗ್ರಹಿಸಿ:** "ಪವಿತ್ರನಾದ ತಂದೆಯೇ, ನಾವು ಒಂದಾಗಿರುವ ಹಾಗೆ ಇವರು ಒಂದಾಗಿರಬೇಕೆಂದು ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು" ಎಂದು ಯೇಸುಕ್ರಿಸ್ತ ಹೇಳುತ್ತಾರೆ.

   "ನೀನು ನನಗೆ ಕೊಟ್ಟ ನಿನ್ನ ನಾಮ" ಎಂದರೆ ಯೇಸುಕ್ರಿಸ್ತನ ಹೆಸರೇ ತಂದೆಯ ಹೆಸರು, ಆ ಹೆಸರೇ ಮಗನಿಗೆ ಕೊಟ್ಟಿದೆ ಎಂದು ಗ್ರಹಿಸಿಕೊಳ್ಳಿರಿ.

2. **ಮಗನ ಹೆಸರನ್ನು ಗ್ರಹಿಸಿರಿ.:** ಮತ್ತಾಯ 1:21.ಲೂಕ 2:11. ಯೋಹಾನ 5:43 ಕುಮಾರನ ಹೆಸರು ಯೇಸುಕ್ರಿಸ್ತನೆಂದು ಎಲ್ಲರೂ ತಿಳಿದುಕೊಂಡಿರುವ ಸತ್ಯ.

3. **ಪರಿಶುದ್ಧಾತ್ಮನ ಹೆಸರನ್ನು ಗ್ರಹಿಸಿರಿ:** ಯೋಹಾನ 14:26ರಲ್ಲಿ "ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೆ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು". ವಿವರಣಿ ಕರ್ತ (ಸಹಾಯಕ) ಎಂದರೆ ಪವಿತ್ರಾತ್ಮ, ಪವಿತ್ರಾತ್ಮ ಎಂದರೆ ಉತ್ತರ ನೀಡುವವನು ಮತ್ತು 1 ಯೋಹಾನ 2:1ರಲ್ಲಿ ಕೂಡಾ ಯೇಸುಕ್ರಿಸ್ತನನ್ನು ಸೂಚಿಸುತ್ತದೆ.

★ **ತಂದೆ ಕುಮಾರ ಪವಿತ್ರಾತ್ಮನ ಹೆಸರೇ ಕರ್ತನಾದ ಯೇಸುಕ್ರಿಸ್ತನೆಂದು ಪರಿಶುದ್ಧ ದೇವರ ವಾಕ್ಯದ ಮುಖಾಂತರ ಸಾಬೀತಾಗಿದೆ.**

ಅನೇಕರಿಗೆ ಮತ್ತಾಯ 28:19ರ ವಚನವನ್ನು ಅರ್ಥಮಾಡಿಕೊಳ್ಳದೆ, ಯೇಸು ಹೇಳಿದ್ದಾನೆಂಬುದಾಗಿ ತಿಳಿದು ನಾವು ತಂದೆ ಮಗ ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಕೊಡುತ್ತೇವೆ ಎಂದು ಹೇಳುತ್ತಾರೆ. ಹಾಗಿದ್ದರೆ (ಅಪೋ.ಕೃ 2:38ರ) ವಚನದ ಪ್ರಕಾರ ಇದು ಪ್ರೇತನ ಸ್ವಂತ ಮಾತಾಗಿದೆಯೋ? ಇದು ಅವನ ಸ್ವಂತ ಮಾತಲ್ಲ, ಬದಲಾಗಿ ಇದು ಪವಿತ್ರಾತ್ಮನ ಪ್ರೇರಣೆಯ ಮಾತಾಗಿದೆ.

ಪೌಲನು (ಅಪೋ.ಕೃ 19:1–5)ರ ವಚನದ ಪ್ರಕಾರ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಕೊಟ್ಟಿದ್ದಾನೆ. ಈ ರೀತಿಯಾಗಿ ಪೌಲನಿಗೆ ದೀಕ್ಷಾಸ್ನಾನ ಕೊಡುವುದಕ್ಕೆ ಹೇಳಿದ್ದು ಮನುಷ್ಯರಾ ಅಥವಾ ಯೇಸುಕ್ರಿಸ್ತನಾ ?

ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಕೊಡುವುದಕ್ಕೆ ಪೌಲನಿಗೆ ತಿಳಿಸಿದ್ದು ಯೇಸುಕ್ರಿಸ್ತನೆಂದು ಗಮನಿಸಿ.

**ಪೌಲನು ಈ ರೀತಿಯಾಗಿ ಹೇಳಿದ್ದಾನೆ :**

- ☛ ನಾನು ಅದನ್ನು ಮನುಷ್ಯನಿಂದ ಹೊಂದಲಿಲ್ಲ, ನನಗೆ ಯಾರೂ ಉಪದೇಶಿಸಲಿಲ್ಲ, ಯೇಸುಕ್ರಿಸ್ತನೇ ಅದನ್ನು ನನಗೆ ಪ್ರಕಟಿಸಿದನು (ಗಲಾತ್ಯ 1:12)
- ☛ ಆದರೆ ಮಾನಿಷ್ಠರೆನಿಸಿಕೊಂಡವರಿಂದ ನನಗೇನು ದೊರೆಯಲಿಲ್ಲ. ಅವರು ಹಿಂದಿನ ಕಾಲದಲ್ಲಿ ಎಂತವರಾಗಿದ್ದರೋ ನನಗೆ ಲಕ್ಷ್ಯವಿಲ್ಲ. ದೇವರು ಮುಖದಾಕ್ಷಿಣ್ಯ ಮಾಡುವವನಲ್ಲ. ಮಾನಿಷ್ಠರೆನಿಸಿಕೊಂಡವರು ನನ್ನ ಮಾತಿಗೆ ಒಪ್ಪಿದರೇ ಹೊರತು ನನಗೇನು ಕಲಿಸಲಿಲ್ಲಾ (ಗಲಾತ್ಯ 2:6)

**ಕೆಲವರು:** ಅಪೊಸ್ತಲರ ಬೋಧನೆಯು ಅವಶ್ಯವಿಲ್ಲವೆಂದು ಹಾಗೂ ಯೇಸುಕ್ರಿಸ್ತನು ಹೇಳಿದಂತೆ ನಾವು ಮಾಡುವೆವು ಎಂದು ಹೇಳುತ್ತಾರೆ.

## ಅಪೊಸ್ತಲರ ಉಪದೇಶದ ಪ್ರಾಮುಖ್ಯತೆಯನ್ನು ಗಮನಿಸಿರಿ:

**ಗಮನಿಸಿ:** ಅಪೊಸ್ತಲರ ಮಾತನ್ನು ಕೇಳುವುದೇ ಯೇಸುಕ್ರಿಸ್ತನ ಮಾತನ್ನು ಕೇಳಿದಂತೆ ಎಂದು ಸತ್ಯವೇದ ಹೇಳುತ್ತದೆ.

**ಯೇಸುಕ್ರಿಸ್ತನು – ಅಪೊಸ್ತಲರ ಕುರಿತು ಹೀಗೆಂದನು**

- ☛ ನಿಮ್ಮ ಮಾತನ್ನು ಕೇಳುವವನು ನನ್ನ ಮಾತನ್ನು ಕೇಳುವವನಾಗಿದ್ದಾನೆ. ನಿಮ್ಮನ್ನು ಅಲಕ್ಷ್ಮ ಮಾಡುವವನು ನನ್ನನ್ನು ಅಲಕ್ಷ್ಯ (ನಿರಾಕರಿಸು) ಮಾಡುವವನಾಗಿದ್ದಾನೆ (ಲೂಕ 10:16).
- ☛ ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುವವನಾಗಿದ್ದಾನೆ (ಮತ್ತಾಯ 10:40)
- ☛ ನಾನು (ಯೇಸುಕ್ರಿಸ್ತನು) ನಿನ್ನ ವಾಕ್ಯವನ್ನು ಇವರಿಗೆ (ಅಪೊಸ್ತಲರಿಗೆ) ಕೊಟ್ಟಿದ್ದೇನೆ. ನಾನು ಲೋಕದವನಲ್ಲದೆ ಇರುವ ಪ್ರಕಾರ, ಇವರು ಲೋಕದವರಲ್ಲ. ಆದಕಾರಣ ಲೋಕ ಇವರ ಮೇಲೆ ದ್ವೇಷ ಮಾಡಿದೆ (ಯೋಹಾನ 17:14).
- ☛ ಆದರೆ ಇವರಿಗೋಸ್ಕರ (ಅಪೊಸ್ತಲರಿಗೋಸ್ಕರ) ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು (ಯೇಸುಕ್ರಿಸ್ತನನ್ನು) ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ (ಯೋಹಾನ 17:20).

**ಗಮನಿಸಿ:** ಯಾರಾದರು ಯೇಸುಕ್ರಿಸ್ತನ ಮೇಲೆ ನಂಬಿಕೆ ಇಡಬೇಕಾದರೆ ಅಪೊಸ್ತಲರ ಉಪದೇಶದ ಮೂಲಕವೇ ನಂಬಬೇಕಾಗುತ್ತದೆ.

**ಅಪೊಸ್ತಲರು ತಮ್ಮ ಉಪದೇಶದ ಕುರಿತು ಈ ರೀತಿಯಾಗಿ ಮಾತನಾಡುತ್ತಾರೆ**

- ☛ ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದುದ್ದನ್ನು ನಾವೇ ಆಗಲಿ, ಪರಲೋಕದಿಂದ ಬಂದ ದೇವದೂತನೇ ಆಗಲಿ ನಿಮಗೆ ಸಾರಿದರೆ ಶಾಪಗ್ರಸ್ತನಾಗಲಿ (ಗಲಾತ್ಯ 1:8).
- ☛ ಸತ್ಯಕ್ಕೆ ವಿರುದ್ಧವಾಗಿ ನಾವೇನು (ಅಪೊಸ್ತಲರೇನು) ಮಾಡಲಾರೆವು. ಸತ್ಯಾಭಿವೃದ್ಧಿಗೋಸ್ಕರವೇ ಸಮಸ್ತವನ್ನು ಮಾಡುತ್ತೇವೆ (1 ಕೋರಿ 13:8).
- ☛ ಸಹೋದರರೇ, ನಾನು (ಪೌಲನು) ನಿಮಗೆ ತಿಳಿಸಿದ ಸುವಾರ್ತೆಯನ್ನು ನಿಮ್ಮ ನೆನಪಿಗೆ ತರುತ್ತೇನೆ; ನೀವು ಅದನ್ನು ಸ್ವೀಕರಿಸಿದಿರಿ. ಅದರಲ್ಲಿ ನಿಂತಿದ್ದೀರಿ. ನಾನು ಯಾವ ಸಂಗತಿಯನ್ನು ಹೇಳಿ ನಿಮಗೆ ಸುವಾರ್ತೆಯನ್ನು ತಿಳಿಸಿದ್ದೆನೋ, ನೀವು ಅದನ್ನು ಪಟ್ಟಾಗಿ ಹಿಡಿದುಕೊಂಡರೆ ಮತ್ತು ನಿಮ್ಮ ನಂಬಿಕೆಯು ನಿರಾದಾರವಾಗದ ಪಕ್ಷಕ್ಕೆ ಆ ಸುವಾರ್ತೆಯಿಂದ ನಿಮಗೆ ರಕ್ಷಣೆಯಾಗುತ್ತದೆ (1 ಕೋರಿ 15:1.2).

☛ **ನಾವಂತು ದೇವರಿಂದ ಹುಟ್ಟಿದವರಾಗಿದ್ದೇವೆ, ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ. ದೇವರಿಂದ ಹುಟ್ಟದವನು ನಮ್ಮ ಮಾತನ್ನು ಕೇಳುವುದಿಲ್ಲ. ಇದು ಸತ್ಯವನ್ನು ಬೋಧಿಸುವ ಆತ್ಮ, ಅದು ಸುಳ್ಳನ್ನು ಬೋಧಿಸುವ ಆತ್ಮ ಎಂದು ಇದರಿಂದಲೇ ತಿಳಿದುಕೊಳ್ಳುತ್ತೇವೆ** (1 ಯೋಹಾನ 4:6).

☛ **ನಾವು ಕ್ರಿಸ್ತನ ರಾಯಭಾರಿಗಳಾಗಿದ್ದೇವೆ. ದೇವರೇ ನಮ್ಮ ಮೂಲಕ ಬುದ್ಧಿ ಹೇಳುವ ಹಾಗಾಯಿತು. ದೇವರೊಂದಿಗೆ ಸಮಾಧಾನವಾಗಿರೆಂದು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇವೆ.** (2 ಕೋರಿ 5:20).

**ಗಮನಿಸಿ:** ಅಪೊಸ್ತಲರು ಹೇಳುವುದನ್ನು ನಮಗೆ ಅವಶ್ಯವಿಲ್ಲವೆನ್ನುವವರು ಮೇಲಿರುವ ವಾಕ್ಯಗಳಿಗೆ ಯಾವರೀತಿಯಲ್ಲಿ ಉತ್ತರಿಸುವವರಾಗಿದ್ದಿರಿ? ಇಂತವರ ಕುರಿತಾಗಿ ಎಚ್ಚರಿಕೆ ಉಳ್ಳವರಾಗಿರಿ. ಮೇಲೆ ಹೇಳಿರುವ ವಾಕ್ಯದ ಪ್ರಕಾರವಾಗಿ ಅಪೊಸ್ತಲರನ್ನು, ಅವರ ಬೋಧನೆಯನ್ನು ನಿರಾಕರಿಸುವವರು ಮತ್ತು ಅವರು ಬೋಧಿಸಿರುವುದನ್ನು ಉಪದೇಶಿಸದವರು, ಅವರು ಯಾರಾದರೂ ಸರಿ ಅಂತವರು–

1. ಯೇಸುಕ್ರಿಸ್ತನ ಮಾತನ್ನು ಕೇಳದವರು
2. ಯೇಸುಕ್ರಿಸ್ತನನ್ನು ಸ್ವೀಕರಿಸಿದವರು.
3. ಲೋಕಾನುಸಾರವಾಗಿ ಜೀವಿಸುವವರು.
4. ಯೇಸುಕ್ರಿಸ್ತನಲ್ಲಿ ನಂಬಿಕೆ ಇಡದವರು.
5. ಶಾಪಗ್ರಸ್ತರು.
6. ಸತ್ಯಕ್ಕೆ ವಿರೋಧವಾಗಿರುವವರು.
7. ಭ್ರಮೆಗೊಳಿಸುವ ಆತ್ಮನಿಂದ ನಡೆಸಲ್ಪಡುವವರು ಆಗಿದ್ದಾರೆ.

**ಕೆಲವರು:** ತಮ್ಮ ತಪ್ಪನ್ನು ಗ್ರಹಿಸಿ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುವುದಕ್ಕಾಗಲಿ, ಕೊಡುವುದಕ್ಕಾಗಲಿ ಮನಸ್ಸಿಲ್ಲದವರು ತಾವು ಕೊಡುತ್ತಿರುವ ತಪ್ಪಾದ ದೀಕ್ಷಾಸ್ನಾನವನ್ನು ಬಚ್ಚಿಟ್ಟುಕೊಂಡು (ಮರೆಮಾಡಿ) ತಂದೆ ಮಗ ಪವಿತ್ರಾತ್ಮನ ಹೆಸರಿನಲ್ಲಾದರು ಸರಿ ಯೇಸು ಕ್ರಿಸ್ತನ ಹೆಸರಿನಲ್ಲಾದರು ಸರಿ ಎಂದು ಸಮರ್ಥಿಸಿಕೊಳ್ಳುತ್ತಾರೆ. ಹಾಗಾದರೆ ಅವರ ಪ್ರಕಾರ ಎರಡು ದೀಕ್ಷಾ ಸ್ನಾನಗಳಿವೆಯೋ?

☛ **ದೀಕ್ಷಾಸ್ನಾನ ಒಂದೇ ಎಂದು ಸತ್ಯವೇದ ಹೇಳುತ್ತದೆ, "ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ. ಸ್ನಾನದೀಕ್ಷೆ ಒಂದೇ"** (ಎಫೆ 4:5).

ಹಾಗಾದರೆ ಸತ್ಯವೇದವು ದೀಕ್ಷಾಸ್ನಾನ ಒಂದೇ ಎಂದು ಹೇಳುತ್ತಿರುವಾಗ ಯಾವರೀತಿಯಲ್ಲಿ ದೀಕ್ಷಾಸ್ನಾನ ತೆಗೆದುಕೊಂಡರೂ ಪರವಾಗಿಲ್ಲವೆಂದು ಹೇಳುವವರು ವಾಕ್ಯವನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. ಸತ್ಯವನ್ನು ಗ್ರಹಿಸಿಕೊಳ್ಳದೆ ಸುಳ್ಳನ್ನು ಹೇಳುತ್ತಾ ಮುಂದುವರೆಯುತ್ತಿದ್ದಾರೆ.

**ಇನ್ನು ಕೆಲವರು:** ದೇವರ ವಾಕ್ಯವನ್ನು ಡೊಂಕುಮಾಡಿ ಯೇಸುಕ್ರಿಸ್ತನ ಹೆಸರಿನಲ್ಲಿರುವ ದೀಕ್ಷಾಸ್ನಾನವು ಯೆಹೂಧ್ಯರಿಗೆ ಎಂದೂ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನ ದೀಕ್ಷಾಸ್ನಾನವು ಅನ್ಯಜನರಿಗೆಂದು ಹೇಳುತ್ತಾರೆ. ವಾಕ್ಯವನ್ನು ತಪ್ಪಾಗಿ ಅರ್ಥಮಾಡಿಕೊಂಡು ತಪ್ಪಾದ ರೀತಿಯಲ್ಲಿ ಬೋಧಿಸುವವರಗಿದ್ದಾರೆ. ಅಂತಹವರು ಅನೇಕರನ್ನು ತಪ್ಪಾದ ಮಾರ್ಗದಲ್ಲಿ ನಡೆಸುತ್ತಿದ್ದಾರೆ.

☛ **ಮನುಷ್ಯ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು; ಕಟ್ಟಕಡೆಗೆ ಅದು ಮರಣಮಾರ್ಗವೇ** (ಜ್ಞಾನೋಕ್ತಿ 16:25)

☛ **ಈ ಜನರನ್ನು ನಡೆಸುವವರು ದಾರಿ ತಪ್ಪಿಸುವವರಾಗಿದ್ದಾರಷ್ಟೆ, ನಡೆಸಲ್ಪಡುವವರೆಲ್ಲರೂ ನಾಶವಾಗುತ್ತಾರೆ** (ಯೆಶಾಯ 9:16).

ಇವರು ಹೇಳುವ ಪ್ರಕಾರ ಯಹೋದ್ಯರಿಗೆ ಒಂದು ದೀಕ್ಷಾಸ್ನಾನವು, ಅನ್ಯಜನರಿಗೆ ಒಂದು ದೀಕ್ಷಾಸ್ನಾನವು ಇರುವುದಾದರೆ ಎರಡು ದೀಕ್ಷಾಸ್ನಾನವಾಗುತ್ತದೆ. ಇದು ವಾಕ್ಯಕ್ಕೆ ವಿರುದ್ಧವಾಗಿದೆ.

**ಗಮನಿಸಿ:** ಯೆಹೂದ್ಯರಷ್ಟೇ ಅಲ್ಲ, ಬದಲಾಗಿ ಸಮಾರ್ಯದವರು, ಅನ್ಯಜನರು ಮತ್ತು ಎಲ್ಲರೂ ಯೇಸುಕ್ರಿಸ್ತನ ನಾಮದಲ್ಲಿ ದೀಕ್ಷಾಸ್ನಾನ ಹೊಂದಿದರೆ ಹೊರತು ಬೇರೆ ಯಾವ ಹೆಸರಿನಲ್ಲಿಯೂ ದೀಕ್ಷಾಸ್ನಾನ ಹೊಂದಲಿಲ್ಲ. **(ಎಫೇಸದವರು ಅನ್ಯಜನರು):**

☛ **ಹೀಗಿರುವುದರಿಂದ ಅನ್ಯಜನರಾದ ನಿಮ್ಮ ನಿಮಿತ್ತ** (ಎಫೇ 3:1)

☛ **ನಿಮ್ಮ ಜನ್ಮದಿಂದ ಅನ್ಯಜನರಾಗಿದ್ದೀರಿ; ಶರೀರದಲ್ಲಿ ಕೈಯಿಂದ ಸುನ್ನತಿ ಮಾಡಿಸಿಕೊಂಡು ಸುನ್ನತಿಯವರೆನಿಸಿಕೊಳ್ಳುವವರು ನಿಮ್ಮನ್ನು ಸುನ್ನತಿ ಇಲ್ಲದವರೆಂದು ಹೇಳುತ್ತಾರೆ** (ಎಫೇ2:11).

ಅಪೊಸ್ತಲರ ಕೃತ್ಯ 19:1–5ನೇ ವಚನಗಳಲ್ಲಿ ಪೌಲನು ಎಫೇನ ಪಟ್ಟಣಕ್ಕೆ ಬಂದು ಅಲ್ಲಿರುವ ಜನರಿಗೆ ಯೇಸುಕ್ರಿಸ್ತನ ನಾಮದಲ್ಲಿ ದೀಕ್ಷಾಸ್ನಾನ ಮಾಡಿಸಿದನು. ಈ ಎಫೇಸಪಟ್ಟಣದವರು ಅನ್ಯಜನರೆಂದು ಮೇಲಿನ ವಾಕ್ಯದಲ್ಲಿ ಗಮನಿಸಿ !

☛ **ಅನ್ಯಜನರಾದ ಕೊರ್ನೇಲ್ಯನ ಮನೆಯವರು ಯೇಸುಕ್ರಿಸ್ತನ ನಾಮದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಪ್ರೇತನು ಅಪ್ಪಣೆಕೊಟ್ಟನು** (ಅಪೊ.ಕೃ 10:12–48).

☛ **ಸಾಮರ್ಯರು ಕೂಡ ಯೇಸುಕ್ರಿಸ್ತನ ನಾಮದಲ್ಲಿ ದೀಕ್ಷಾಸ್ನಾನ ಹೊಂದಿದರು** (ಅಪೋ.ಕೃ 8:5–12.16)

ಹಾಗಾಗಿ ಬೈಬಲ್ ಗ್ರಂಥದಲ್ಲಿ (ಸತ್ಯವೇದದಲ್ಲಿ) ಸಮಸ್ತ ಆದಿಕ್ರೈಸ್ತರು ಯೇಸುಕ್ರಿಸ್ತನ ನಾಮದಲ್ಲಿ ದೀಕ್ಷಾಸ್ನಾನ ಹೊಂದಿದರೆ ಹೊರತು ಬೇರೆ ಯಾವ ನಾಮದಲ್ಲಿಯೂ ಹೊಂದಲಿಲ್ಲ.

**ಕೆಲವರು:** ಇದಕ್ಕೆ ಸ್ವಲ್ಪ ಸೇರಿಸಿ, ತಂದೆಯ, ಮಗನ, ಪವಿತ್ರಾತ್ಮನ ತ್ರೈಯೇಕ ದೇವರಾದ ಯೇಸುಕ್ರಿಸ್ತನ ಹೆಸರಿನಲ್ಲಿ ಎಂದುಕೊಳ್ಳುತ್ತಾ ಅವರವರ ಇಷ್ಟ ಪ್ರಕಾರವಾಗಿ ದೀಕ್ಷಾಸ್ನಾನವನ್ನು ಮಾಡಿಸುತ್ತಾ ತಮ್ಮ ಸ್ವಂತ ಮಾರ್ಗದಲ್ಲಿ ನಡೆಯುತ್ತಿದ್ದಾರೆ.

**ಇನ್ನು ಕೆಲವರು:** ಯೇಸು ಎಂಬ ಎರಡಕ್ಷರವನ್ನು ದೀಕ್ಷಾಸ್ನಾನ ಕೊಡುವುದಕ್ಕೆ ಉಪಯೋಗಿಸುತ್ತಿದ್ದಾರೆ. ಈ ರೀತಿಯಾಗಿ ಮಾಡುವುದು ಕರ್ತನ ವಾಕ್ಯಕ್ಕೆ ವಿರುದ್ಧವಾಗಿದೆ. ಯಾಕೆಂದರೆ ಬೈಬಲ್ ಗ್ರಂಥದಲ್ಲಿ ತುಂಬಾ ಜನರು ಯೇಸುಗಳೆಂಬ ಹೆಸರಿನವರಾಗಿದ್ದಾರೆ.

ಉದಾ:– ಬಾರ್ ಯೇಸು ಎಂಬಾತನು (ಅಪೋ.ಕೃ 13:6)ರಲ್ಲಿ ಇದ್ದಾರೆ.
ಯೂಸ್ತನೆನಿಸಿಕೊಳ್ಳುವ ಯೇಸು (ಕೊಲೆಸ್ಸೆ 4:11)ರಲ್ಲಿ ಇದ್ದಾರೆ.

**ಇನ್ನೂ ಕೆಲವರು:** ನಾವು ತಂದೆ ಮಗ ಪವಿತ್ರಾತ್ಮನೆಂಬ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ತೆಗೆದುಕೊಳ್ಳುತ್ತಾ, ಕೊಡುತ್ತಾ ಯೇಸುಕ್ರಿಸ್ತನ ನಾಮವನ್ನು ಮನಸ್ಸಿನಲ್ಲಿ ಧರಿಸಿಕೊಂಡಿದ್ದೇವೆಂದು ಭ್ರಮೆಗೊಂಡಿದ್ದಾರೆ. ಆ ರೀತಿಯಾದ ಆಲೋಚನೆಯು ವಾಕ್ಯಕ್ಕೆ ವಿರುದ್ಧವಾದದ್ದು. ಯಾಕೆಂದರೆ (ಮತ್ತಾಯ 12:34) ರಲ್ಲಿ ಈ ವಿಧವಾಗಿ ಬರೆಯಲ್ಪಟ್ಟಿದೆ: "ಹೃದಯ ತುಂಬಿದರೆ ಬಾಯಲ್ಲಿ ಹೊರಡುವುದು".

ಗಮನಿಸಿದ್ದಿಯೋ ಸಹೋದರ/ಸಹೋದರಿ, ನಿನ್ನ ಹೃದಯದಲ್ಲಿ ಯೇಸುಕ್ರಿಸ್ತನ ನಾಮವು ತುಂಬಿರುವುದಾದರೆ, ಬಾಯಿಂದ ಅದನ್ನೇ ನುಡಿಯುವವನಾಗಿದ್ದೀ. ಹಾಗಾದರೆ ನೀನು ದೀಕ್ಷಾಸ್ನಾನ ಕೊಡುವಾಗ "ಯೇಸುಕ್ರಿಸ್ತನ ನಾಮದಲ್ಲಿ" ಎಂದು ಉಚ್ಚರಿಸುತ್ತಿದ್ದೆ. ಯಾಕೆಂಬರೆ ವಾಕ್ಯವು ಈ ರೀತಿಯಾಗಿ ಹೇಳುತ್ತದೆ.

☛ **ನೀವು ನುಡಿಯಿಂದಾಗಲಿ, ನಡೆಯಿಂದಾಗಲಿ ಏನು ಮಾಡಿದರೂ ಅದೆಲ್ಲವನ್ನು ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲೇ ಮಾಡಿರಿ (ಕೊಲೆಸ್ಸೆ 3:17).**

**ಕೆಲವರು:** ವಾಕ್ಯವನ್ನು ಪರಿಶೀಲಿಸದವರು ಸ್ನಾನಿಕನಾದ ಯೋಹಾನನು ಯಾವ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು ಎಂಬುದಾಗಿ ಕೇಳುತ್ತಾರೆ. ಆದರೆ ಸ್ನಾನಿಕನಾದ ಯೋಹಾನನು ಈ ರೀತಿಯಾಗಿ ಹೇಳುತ್ತಾನೆ:

☛ **ನಾನಂತು ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ** (ಮತ್ತಾಯ 3:11)

☛ **ಸ್ನಾನಿಕನಾದ ಯೋಹಾನನು ಮನಸ್ಸು ತಿರುಗಿಸಿಕೊಳ್ಳುವುದಕ್ಕೆ ದೀಕ್ಷಾಸ್ನಾನ ಮಾಡಿಸಿದನೆ ಹೊರತು ಬೇರೆ ಯಾವ ನಾಮದಲ್ಲಿಯೂ ಕೊಡಲಿಲ್ಲ. ಯೋಹಾನನು ಮನಸ್ಸನ್ನು ತಿರುಗಿಸಿಕೊಳ್ಳುವುದಕ್ಕೆ ದೀಕ್ಷಾಸ್ನಾನ ಮಾಡಿಸಿದನೆಂದು** (ಅಪೊ.ಕೃ 19:4)**ರಲ್ಲಿ ಪೌಲನು ಹೇಳುತ್ತಾನೆ. ಆದುದರಿಂದ ಎಲ್ಲರೂ** (ಮತ್ತಾಯ 28:19) **ಮತ್ತು** (ಅಪೊ.ಕೃ 2:38)**ರಲ್ಲಿರುವ ವಾಕ್ಯಗಳನ್ನು ಅರ್ಥಮಾಡಿಕೊಳ್ಳದೆ ತಪ್ಪಾದ ರೀತಿಯ ದೀಕ್ಷಾಸ್ನಾನವನ್ನು ಮಾಡಿಸುತ್ತಿದ್ದಾರೆ.**

**ಕೆಲವರು:** ಸತ್ಯವನ್ನು ಸತ್ಯವಾಗಿ ಅಂಗೀಕರಿಸದೆ, ನೀವು ಕ್ರೈಸ್ತರಿಗೆ ತಿಳಿಸುವುದು (ಉಪದೇಶಿಸುವುದು) ಬೇಡ, ದೇವರನ್ನು ತಿಳಿಯದ ಅನ್ಯಜನರಿಗೆ ತಿಳಿಸಿರಿ ಎಂದು ಕೋಪದಿಂದ ಉತ್ತರಿಸುತ್ತಾರೆ.

**ಗಮನಿಸಿ:** ನೀವು ಸತ್ಯವೇದವನ್ನು ಚೆನ್ನಾಗಿ ಪರಿಶೀಲಿಸಿ ನೋಡಿ. ಯೇಸುಕ್ರಿಸ್ತನು ಮೂರುವರೆ ವರ್ಷ ಧರ್ಮಶಾಸ್ತ್ರವನ್ನು ಮತ್ತು ದೇವರನ್ನು ತಿಳಿದವರಿಗೆ ಮಾತ್ರ ಉಪದೇಶಿಸಿರೆಂದು ಆಜ್ಞಾಪಿಸಿದನು.

☛ **ಆ 12 ಮಂದಿಯನ್ನು ಯೇಸು ಕಳುಹಿಸಿದನು. ಕಳುಹಿಸುವಾಗ ಅವರಿಗೆ ಅಪ್ಪಣೆ ಕೊಟ್ಟದ್ದೇನಂದರೆ ಅನ್ಯಜನಗಳ ಕಡೆಗೆ ಹೋಗಬೇಡಿರಿ. ಸಮಾರ್ಯರ ಊರೊಳಗೆ ಕಾಲಿಡಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡು ಕುರಿಗಳಂತಿರುವ ಇಸ್ರಾಯೇಲ್ಯರ ಮನೆತನದವರ ಬಳಿಗೆ ಹೋಗಿರಿ** (ಮತ್ತಾಯ 10:5.6).

☛ **ದೇವರ ವಾಕ್ಯವನ್ನು ಮೊದಲು ನಿಮಗೆ ಹೇಳುವುದು ಅವಶ್ಯವಿತ್ತು: ಆದರೆ ನೀವು ಅದನ್ನು ತಳ್ಳಿಬಿಟ್ಟು ನಿಮ್ಮನ್ನು ನಿತ್ಯಜೀವನಕ್ಕೆ ಅಪಾತ್ರರೆಂದು ತೀರ್ಪು ಮಾಡಿಕೊಂಡದ್ದರಿಂದ...** (ಅಪೊ.ಕೃ 13:46)

ಆ ದಿನದಲ್ಲಿ ಯೆಹೂದ್ಯರು ಮಾಡಿದಂತೆ ಈ ದಿನದ ಕ್ರೈಸ್ತರು ಯೇಸುಕ್ರಿಸ್ತನ ಹೆಸರನ್ನು ನಿರಾಕರಿಸುತ್ತಿದ್ದಾರೆ.

**ಗಮನಿಸಿ:** ಅಪೊಸ್ತಲರು (ಅಪೊ.ಕೃ 2:38)ರ ಪ್ರಕಾರವಾಗಿ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನವನ್ನು ಕೊಟ್ಟು (ಮತ್ತಾಯ 28:19) ರಲ್ಲಿನ ವಾಕ್ಯವನ್ನು ನೆರವೇರಿಸಿದ್ದಾರೆಂದು ಅನೇಕರು ಅರ್ಥಮಾಡಿಕೊಳ್ಳದೆ ಹೋಗಿದ್ದಾರೆ.

**ನೀವು ಇನ್ನೂ ತಿಳಿಯಬೇಕಾಗಿದ್ದರೆ ಕ್ರಿ.ಶ. 3ನೇ ಶತಮಾನದವರೆಗೆ ಆದಿಕ್ರೈಸ್ತರು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಕೊಟ್ಟದ್ದಕ್ಕೆ, ತೆಗೆದುಕೊಂಡಿದ್ದಕ್ಕೆ ಬೈಬಲ್ ಗ್ರಂಥದಲ್ಲಿ ಮತ್ತು ಇತಿಹಾಸದಲ್ಲಿ ರುಜುವಾಗಿದೆ.**

**ಈ ಚರಿತ್ರೆಯ ಆಧಾರಗಳನ್ನು ಗಮನಿಸಿರಿ.**

| | |
|---|---|
| 1. ಪುರಾತನ ಆಧಾರಗಳಿಗನುಸಾರವಾಗಿ ಎಲ್ಲಾ ಕಡೆ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ನಡೆದಿದೆ ಎಂದು ಹೇಳಲಾಗುತ್ತಿದೆ. | ಬ್ರಿಟಾನಿಕಾ ಎನ್‌ಸೈಕ್ಲೋಪಿಡಿಯಾ vol-3 ಪುಟ–82 Britanica Encyclopedia vol-3 P-82 |
| 2. ಮೂರನೇ ಶತಮಾನದಲ್ಲಿ ತ್ರೈಯೇಕ ಸಿದ್ಧಾಂತ ಅಭಿವೃದ್ಧಿಯಾಗುವವರೆಗೂ ಆದಿಕ್ರೈಸ್ತ ಸಭೆ ಯಾವಾಗಲೂ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುತ್ತಿದ್ದರು. | ಕ್ಯಾನಿ ಎನ್‌ಸೈಕ್ಲೋಪಿಡಿಯಾ ಆಫ್ ರಿಲೀಜನ್ ಪುಟ–53 |
| 3. ಯೇಸುಕ್ರಿಸ್ತನ ಹೆಸರಿನಲ್ಲಿರುವ ದೀಕ್ಷಾಸ್ನಾನವು ಹೊಸ ಒಡಂಬಡಿಕೆಯಲ್ಲಿ ಮಾತ್ರವಿದೆ. | ದಿ ನ್ಯೂ ಸ್ಕ್ಯಾಫ್ ಹೆರಜಾಗ್ ಎನ್‌ಸೈಕ್ಲೋಪಿಡಿಯಾ ಆಫ್ ರಿಲಿಜನ್ ನಾಲೆಡ್ಜ್ vol-1957 |
| 4. ಪರಿಶುದ್ಧ ಮತ್ತಾಯ 28:19ರ ಮೂರು ವಿಧದ ಹೆಸರು ಆದಿಸಭೆಯು ಉಪಯೋಗಿಸಿದ್ದು ಕಂಡುಬರಲಿಲ್ಲ. ಅವಶ್ಯಕವಾಗಿ ಗಮನಿಸಿರಿ. ಆದರೆ ಯೇಸುಕ್ರಿಸ್ತನ ಅಥವಾ ಕರ್ತನಾದ ಯೇಸುಕ್ರಿಸ್ತನ ಎನ್ನುವ ಪದಗಳನ್ನು ಉಪಯೋಗಿಸಿದರು. | ಹ್ಯಾಸ್ಟಿಂಗ್ ಡಿಕ್ಷನರಿ ಆಫ್ ದಿ ಬೈಬಲ್ ಪು–88 |

| | |
|---|---|
| 5. ಯೇಸುಕ್ರಿಸನ ನಾಮದಲ್ಲಿ ಎಂಬ ಪದವನ್ನು ಉಪಯೋಗಿಸಿಕೊಂಡು ಕ್ರೈಸ್ತರ ದೀಕ್ಷಾಸ್ನಾನವು ಕೊಡಲ್ಪಟ್ಟಿತು. ಆದಿ ಸಭೆಯು ಚರಿತ್ರೆಯಲ್ಲಿ ತ್ರೈಯೇಕ ಸೂತ್ರವನ್ನು ಉಪಯೋಗಿಸಿದ ಕಾಲದವರೆಗೂ ಯೇಸುಕ್ರಿಸ್ತನ ಹೆಸರಿನಲ್ಲೇ ದೀಕ್ಷಾಸ್ನಾನ ಕಾರ್ಯಕ್ರಮ ನಡೆಸಲ್ಪಡುತ್ತಿತ್ತು. | ಹ್ಯಾಸ್ಟಿಂಗ್ ಎನ್‌ಸೈಕ್ಲೋಪಿಡಿಯಾ ಆಫ್ ರಿಲೀಜನ್ vol-2 ಪುಟ–377, 378, 389 |
| 6. ರೋಮನ ಕ್ಯಾಥೋಲಿಕ್ ಫಾದರ ಟೇರ್‌ಟೂಲಿಯನ್ (Tertultian) ಮೂಲಕ ತ್ರೈಯೇಕ ಎಂಬ ಪದವು ಆರಂಭಿಸಲ್ಪಟ್ಟಿತ್ತು. | ನ್ಯೂ ಇಂಟರ್‌ನ್ಯಾಷನಲ್ ಎನ್‌ಸೈಕ್ಲೋಪಿಡಿಯಾ vol-2 ಪು–477 |
| 7. ಮೂರನೇ ಶತಮಾನದಲ್ಲಿ ದೀಕ್ಷಾಸ್ನಾನವು ಯೇಸುಕ್ರಿಸ್ತನ ಹೆಸರಿನಿಂದ ತಂದೆ, ಮಗ ಪವಿತ್ರಾತ್ಮ ಎಂಬ ಪದಗಳಿಗೆ ಕ್ಯಾಥೋಲಿಕ್ ಸಂಸ್ಥೆಯವರಿಂದ ಬದಲಾಯಿಸಲ್ಪಟ್ಟಿತ್ತು. | ಬ್ರಿಟಾನಿಕಾ ಎನ್‌ಸೈಕ್ಲೋಪಿಡಿಯಾ vol-3 addition 11 ಪುಟ–365, 366 |
| 8. ಕ್ಯಾಥೋಲಿಕ್ ಸಭೆಯ ಮೂಲಕ ದೀಕ್ಷಾಸ್ನಾನವು ಬದಲಾಯಿತೆಂದು ಕ್ಯಾಥೋಲಿಕ್‌ನವರು ಗುರುತಿಸಿದ್ದಾರೆ. | ಕ್ಯಾಥೋಲಿಕ್ ಎನ್‌ಸೈಕ್ಲೋ ಪಿಡಿಯಾ vol-2 ಪುಟ–263 |
| 9. ಹೆಸರೆನ್ನುವುದು ವ್ಯಕ್ತಿಯ ಪುರಾತನ ಪೂರಕ ಪದವಾಗಿದೆ. ನಿರ್ವಹಣೆಯನ್ನು ಸೂಚಿಸುವುದಕ್ಕೆ ವ್ಯಕ್ತಿಯ ಹೆಸರು ಯಾವಾಗಲು ಕೊಡಲ್ಪಡುವುದು. ಆದರೆ ಯಾರಾದರು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದುವುದಾದರೆ ಆತನಿಗೆ ಸ್ವಕೀಯ ಸ್ವತ್ತಾಗಿ ಮಾರ್ಪಾಡುವನು. "ನೀವು ಕ್ರಿಸ್ತನವರು" (1 ಕೋರಿ 2:23) | ಹ್ಯಾಸ್ಟಿಂಗ್ ಎನ್‌ಸೈಕ್ಲೋಪಿಡಿಯಾ ಆಫ್ ರಿಲೀಜನ್ vol-2 ಪುಟ–377 |

## ಯೇಸುಕ್ರಿಸ್ತನ ಹೆಸರಿನ ಪ್ರಾಮುಖ್ಯತೆ

- ಯೇಸುಕ್ರಿಸ್ತನ ಹೆಸರಿನಲ್ಲಿ ಪಾಪ ಕ್ಷಮಾಪಣೆ (ಲೂಕ 24:46, 47, ಅಪೊ.ಕೃ 10:43)
- ಯೇಸುಕ್ರಿಸ್ತನ ಹೆಸರಿನಲ್ಲಿ ರಕ್ಷಣೆ (ಅಪೊ.ಕೃ 4:12)
- ಯೇಸುಕ್ರಿಸ್ತನ ಹೆಸರಿನಲ್ಲಿ ತೊಳೆಯಲ್ಪಡುವಿಕೆ (1 ಕೋರಿ 6:11)
- ಯೇಸುಕ್ರಿಸ್ತನ ಹೆಸರಿನಲ್ಲಿ ಪರಿಶುದ್ಧಾತ್ಮನು ಬರುವನು. (ಯೋಹಾನ 14:26, 17:26)
- ಯೇಸುಕ್ರಿಸ್ತನ ಹೆಸರಿನಲ್ಲಿ ಪ್ರಾರ್ಥನೆ ಮಾಡುವುದು (ಯೋಹಾನ 14:13, 14:16)
- ಯೇಸುಕ್ರಿಸ್ತನ ಹೆಸರಿನಲ್ಲಿ ಸ್ವಸ್ಥತೆ (ಯಾಕೋಬ 5:14, ಮಾರ್ಕ 16:17, ಅಪೊ.ಕೃ 3:6)
- ಯೇಸುಕ್ರಿಸ್ತನ ಹೆಸರಿನಲ್ಲಿ ಸುವಾರ್ತ ಸೇವೆ (ಅಪೊ.ಕೃ 8:12, 9:23–29, ಯಾಕೋಬ 5:10)
- ಯೇಸುಕ್ರಿಸ್ತನ ಹೆಸರಿನಲ್ಲಿ ಅನ್ಯಜನರಿಗೆ ನಿರೀಕ್ಷೆ (ಮತ್ತಾಯ 12:18)
- ಯೇಸುಕ್ರಿಸ್ತನ ಹೆಸರಿನಲ್ಲಿ ಸೈತಾನನು ಓಡುವನು (ಲೂಕ 9:49–50, 10:17, ಅಪೊ.ಕೃ 16:18)
- ಯೇಸುಕ್ರಿಸ್ತನ ಹೆಸರಿನಲ್ಲಿ ದುರ್ಮಾರ್ಗದಿಂದ ಬಿಡುಗಡೆ (2 ತಿಮೋತಿ 2:19)
- ಯೇಸುಕ್ರಿಸ್ತನ ಹೆಸರಿನಲ್ಲಿ ನಡೆಯಿಂದ ಮತ್ತು ನುಡಿಯಿಂದ ಎಲ್ಲವೂ ಮಾಡಬಹುದು (ಕೊಲೊಸ್ಸೆ 3:17)
- ಯೇಸುಕ್ರಿಸ್ತನ ಹೆಸರಿನಲ್ಲಿ ನಿತ್ಯಜೀವ (1 ಯೋಹಾನ 5:13)
- ಯೇಸುಕ್ರಿಸ್ತನ ಹೆಸರಿನಲ್ಲಿ ಐಕ್ಯತೆ (ಮತ್ತಾಯ 18:20)
- ಯೇಸುಕ್ರಿಸ್ತನ ಹೆಸರು ಶ್ರೇಷ್ಠವಾದದ್ದು (ಇಬ್ರಿ 1:4)
- ಯೇಸುಕ್ರಿಸ್ತನ ಹೆಸರಿನಲ್ಲಿ ಆಶೀರ್ವಾದ (ಫಿಲೊಮೋನ 1:25, 2 ಥೆಸ 3:18)
- ಯೇಸುಕ್ರಿಸ್ತನ ಹೆಸರಿನಲ್ಲಿ ನಂಬಿಕೆ ಇಡಬಹುದು (ಯೋಹಾನ 20:31, ಯೋಹಾನ 3:18, ಯೋಹಾನ 16:23, 1 ಥೆಸ 3:6, ಮತ್ತಾಯ 18:5, ಮಾರ್ಕ 9:37, 1 ಯೋಹಾನ 3:23)

ಪ್ರಿಯರೇ, ಈವರೆಗೂ ನೀವು ಓದಿದ ಈ ವಿಷಯದ ಕುರಿತು ಅಪೊಲಸ್ತರು, ಯೇಸುಕ್ರಿಸ್ತನು ಹೇಳಿದ ದೀಕ್ಷಾಸ್ನಾನದ ಅಪ್ಪಣೆಯನ್ನು ನೆರವೇರಿಸಿ ನಮಗಾಗಿ ಸರಿಯಾದ ಬುನಾದಿ ಹಾಕಿದ್ದಾರೆ. ಆದಿಕ್ರೈಸ್ತ ಸಭೆಯು ಆ ಬುನಾದಿಯ ಮೇಲೆ ಕಟ್ಟಲ್ಪಟ್ಟಿದೆ.

- ☛ **ಅಪೊಲಸ್ತರು ಪ್ರವಾದಿಗಳು ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ (ಎಪೆ 2:20).**

ಅಪೊಲಸ್ತರು ಪ್ರವಾದಿಗಳು ಹಾಕಿದ ಬುನಾದಿ ಯಾವುದು ?

## ಪಾಪಕ್ಷಮಾಪಣೆ / ಪಾಪ ಪರಿಹಾರ

**ಅಪೊಲಸ್ತರು:**

- ☛ **ಪ್ರೇತನು ಅವರಿಗೆ ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ, ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ** (ಅಪೋ.ಕೃ 2:38)
- ☛ **ಈಗ ನೀನೇಕೆ ಸವಾಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು** (ಅಪೋ.ಕೃ 22:16)

**ಪ್ರವಾದಿಗಳು:**

- ☛ **ಪಾಪ ಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು ಯೆರುಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೆ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲು ಬರೆದಿದೆ** (ಲೂಕ 24:47)
- ☛ **ಆತನಲ್ಲಿ ನಂಬಿಕೆ ಇಡುವ ಪ್ರತಿಯೊಬ್ಬರು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರೂ ಸಾಕ್ಷಿ ಹೇಳಿದ್ದಾರೆ ಅಂದನು** (ಅಪೋ.ಕೃ 10:43)

  ಅದಕ್ಕಾಗಿ ಯೇಸುಕ್ರಿಸ್ತನ ಹೆಸರಿನ ದೀಕ್ಷಾಸ್ನಾನದ ಮೂಲಕ ಪಾಪ ಪರಿಹಾರ ಎಂಬ ಬೋಧನೆಯು ಅಪೊಸ್ತಲರು, ಪ್ರವಾದಿಗಳು ಹಾಕಿದ ಬುನಾದಿಯಾಗಿದೆ.
- ☛ **ಆದುದರಿಂದ ನಿರ್ಜೀವಕರ್ಮಗಳ ಮೇಲಣ ನಂಬಿಕೆ ಬಿಟ್ಟು, ದೇವರಲ್ಲಿಯೇ ನಂಬಿಕೆ ಇಡಬೇಕಾದದ್ದು, ಸ್ನಾನ, ಅಸ್ತಾರ್ಪಣಗಳ ವಿಷಯವಾದ ಉಪದೇಶ, ಸತ್ತವರಿಗೆ ಪುನರುತ್ಥಾನವು, ನಿತ್ಯವಾದ ನ್ಯಾಯ ತೀರ್ಪೂ ಉಂಟೆಂಬುವುದು ಇವುಗಳನ್ನು ಪದೇಪದೇ ಅಸ್ತಿವಾರವಾಗಿ ಹಾಕದೆ, ಕ್ರಿಸ್ತನ ವಿಷಯವಾದ ಪ್ರಥಮ ಬೋಧೆಯನ್ನು ಕುರಿತು ಇನ್ನು ಮಾತನಾಡದೆ, ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗೋಣ (ಇಬ್ರಿ 6:1,2).**
- ☛ **ಹಾಕಿರುವ ಅಸ್ತಿವಾರವು ಯೇಸುಕ್ರಿಸ್ತನೆ; ಆ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ (1 ಕೋರಿ 3:11).**

ಈ ವಾಕ್ಯದ ಪ್ರಕಾರವಾಗಿ ದೀಕ್ಷಾಸ್ನಾನ ಕುರಿತಾದ ಬುನಾದಿಯನ್ನು ಅಪೊಸ್ತಲರು ಹಾಕಿದರು. ಆ ಬುನಾದಿಯ ಮೇಲೆ ಕಟ್ಟಲ್ಪಡುವುದು ದೇವರಿಗೆ (ಪರಿಶುದ್ಧಾತ್ಮನಿಗೆ) ಮನೆಯಾಗಿದೆ. ಆದುದರಿಂದ ಮತ್ತೊಮ್ಮೆ ಬುನಾದಿ ಹಾಕಬಾರದೆಂದು ಬರೆದಿದೆ. ಕ್ರಿ.ಶ. ಮೂರನೇ ಶತಮಾನದಲ್ಲಿ ಎಂದರೆ (ಕ್ರಿ.ಶ. 325ನೇ ವರ್ಷದಲ್ಲಿ) ಯೇಸುಕ್ರಿಸ್ತನ ನಾಮದಲ್ಲಿ ಇರುವ ದೀಕ್ಷಾಸ್ನಾನವನ್ನು ತೆಗೆದುಹಾಕಿ "ತಂದೆ ಮಗ ಪವಿತ್ರಾತ್ಮನ ಹೆಸರಿನಲ್ಲಿ" ಎಂಬ ಮತ್ತೊಂದು ಬುನಾದಿಯನ್ನು ರೋಮನ ಕ್ಯಾಥೋಲಿಕ್ ಸಭೆಯವರು ಹಾಕಿದರು. ಅದರ ಮೇಲೆ ಈಗ ಸಭೆ ಸಂಸ್ಥೆಗಳು ಕಟ್ಟಲ್ಪಟ್ಟಿವೆ. ಅದೇ ಬೋಧನೆಯನ್ನು ಅನೇಕರು ಬೋಧಿಸುತ್ತಿದ್ದಾರೆ (ಪ್ರಕಟಣೆ 22:18, 19).

ಪ್ರಿಯ ಕ್ರೈಸ್ತ ಸಹೋದರ/ಸಹೋದರಿ, ಇಲ್ಲಿಯವರೆಗೆ ನೀವು ಓದಿದ ಪ್ರಕಾರ ಸಭಾ ಸಂಸ್ಥೆಯವರು ಕೊಡುವ ವಾಕ್ಯಕ್ಕೆ ವಿರುದ್ಧವಾದ ದೀಕ್ಷಾಸ್ನಾನವನ್ನು ಹೊಂದಿರುವುದಾದರೆ, ಆಲಸ್ಯಮಾಡದೆ ಮತ್ತೆ ತಿರುಗಿ ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿರಿ.

ಒಂದುಸಲ ತೆಗೆದುಕೊಂಡಿದ್ದೇವಲ್ಲಾ! ಮತ್ತೆ ತೆಗೆದುಕೊಂಡರೆ ಹೇಗೆ ಎಂದು ಆಲೋಚಿಸುತ್ತೀರಾ? ನೀವು ಹೊಂದಿದ ದೀಕ್ಷಾಸ್ನಾನ ಬೈಬಲ್ ಗ್ರಂಥದಲ್ಲಿ ಆದಿಕ್ರೈಸ್ತ ವಿಶ್ವಾಸಿಗಳು ತೆಗೆದುಕೊಂಡ ಹಾಗೆ ಇದೆಯಾ? ಒಂದುವೇಳೆ ಹಾಗಿಲ್ಲದಿದ್ದರೆ ಅದು "ಒಣ ಪಾಪಿಯಾಗಿ ನೀರಿನಲ್ಲಿ ಮುಳುಗಿ, ಹಸಿ ಪಾಪಿಯಾಗಿ ಹೊರಗೆ ಬಂದ ಆಗಿದೆ". ಆದುದರಿಂದ ನೀವು ಹೊಂದಿದ ದೀಕ್ಷಾಸ್ನಾನವು ವಾಕ್ಯಾನುಸಾರವಾಗಿ ಇಲ್ಲವೆಂದು ತಿಳಿದ ಬಳಿಕ ಮತ್ತೊಂದುಸಾರಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದಕ್ಕೆ ವಾಕ್ಯಾಧಾರಗಳನ್ನು ನೋಡಿರಿ.

ಅಪೋ.ಕೃ 19:1–5ರಲ್ಲಿ ಗಮನಿಸುವುದಾದರೆ ಯೋಹಾನನು ದೀಕ್ಷಾಸ್ನಾನ ಕೊಟ್ಟ ಬಳಿಕ ಮತ್ತೊಂದು ಸಾರಿ ಅವರು ಪೌಲನಿಂದ ದೀಕ್ಷಾಸ್ನಾನ ಹೊಂದಿದ್ದನ್ನು ನೋಡುತ್ತೇವೆ. ಆದುದರಿಂದ ನೀವು ಅಪೊಸ್ತಲರು ಪ್ರವಾದಿಗಳು ಹಾಕಿದ ಅಸ್ತಿವಾರದ ಮೇಲೆ ಕಟ್ಟಲ್ಪಡದೆ, ವಾಕ್ಯಾನುಸಾರವಾದ ದೀಕ್ಷಾಸ್ನಾನವನ್ನು ಹೊಂದದೆ, ದೇವರ ಪದ್ಧತಿಯನ್ನು ಮತ್ತು ಆತನ ನೀತಿಯನ್ನು, ಆಜ್ಞೆಗಳನ್ನು ಮೀರಿ ದೇವರ ರಾಜ್ಯಕ್ಕೆ ಸೇರಬಲ್ಲಿರಾ? ಧರ್ಮಶಾಸ್ತ್ರದ ಉಪದೇಶಕರೆ, ಪರಿಸಾಯರೆ, ನಿಮ್ಮ ಬಳಿ ಇರುವ ದೇವರ ಸಂಕಲ್ಪವನ್ನು ನಿರಾಕರಿಸಬೇಡಿ ಎಂದು ತಿಳಿಯಪಡಿಸುತ್ತೇವೆ.

☛ **ಆದರೆ ಪರಿಸಾಯರು ಧರ್ಮೋಪದೇಶಕರು ಅವನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳದೆ ಹೋದುದರಲ್ಲಿ ತಮ್ಮ ವಿಷಯವಾದ ದೇವರ ಸಂಕಲ್ಪವನ್ನು ನಿರಾಕರಿಸಿದರು** (ಲೂಕ 7:30).

☛ **ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲಾ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ, ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ ಎಂದು ಹೇಳಿದನು** (ಅಪೋ.ಕೃ 4:12).

☛ **ಹೀಗೆ ನೀವು ರಕ್ಷಿಸಲ್ಪಟ್ಟು ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರಭಾವವನ್ನು ಸಂಪಾದಿಸಿ ಕೊಳ್ಳಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಕರೆದನು** (2 ಥೆಸ 2:14).

ಈ ಚಿಕ್ಕ ಪುಸ್ತಕದಲ್ಲಿ ಬರೆಯಲ್ಪಟ್ಟಿರುವ ಕುರಿತು ಯಾವುದಾದರೂ ಸಂಶಯವಿದ್ದಲ್ಲಿ, ಅರ್ಥವಾಗದೆ ಇದ್ದಲ್ಲಿ, ಇನ್ನೂ ಸತ್ಯವೇದದ ಸತ್ಯಗಳನ್ನು ತಿಳಿದುಕೊಳ್ಳಬೇಕಾದರೆ, ಒಂದುವೇಳೆ ಇದು ತಪ್ಪೆಂದು ನಿರೂಪಿಸಬೇಕೆನ್ನುವವರು, ಯೇಸುಕ್ರಿಸ್ತನ ನಾಮದಲ್ಲಿ ದೀಕ್ಷಾಸ್ನಾನ ಪಡೆಯಬೇಕೆಂದಿರುವವರು, ಪ್ರೇಮಪೂರ್ವಕವಾಗಿ ಬಂದು ಸಂಪರ್ಕಿಸಬೇಕೆಂದು ಕೇಳಿಕೊಳ್ಳುತ್ತೇವೆ.


ಪುಸ್ತಕಗಳಿಗಾಗಿ ಸಂಪರ್ಕಿಸಿರಿ

ಎಸ್. ಡ್ಯಾನಿಯೆಲ್ ಸಂಪತ್ ಕುಮಾರ್

ತಿರುನಿಲೈ ಕಾಲೋನಿ ನಂ. 147,

ವಿಚ್ಚುರ್. ಪೋಸ್ಟ್

ಚನ್ನೈ . ಪಿನ್. 600103



*for books contact :*

**S.DANIEL SAMPATH KUMAR**

*No. 147, Thirunilai colony ,*
*vichoor post , chennai - 600 103*

*E-Mail : sdanielsampathkumar@gmail.com*
*Website : danielendtimebooksministry.org*
*Phone No :* 99419 74213 , 96001 71260